# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 430
02. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
03. ಉತ್ತರಿಸುವ ದಿನಾಂಕ : 16.12.2021
04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಆರಕ್ಷಕ ಪೇದೆ ಮತ್ತು ಮುಖ್ಯ ಪೇದೆಗಳಿಗೆ ರೂ.400/-ಗಳ ಮಾಸಿಕ ಪಡಿತರ ಭತ್ಯೆ ಯಾವ ಸಾಲಿನಿಂದ ನೀಡಲಾಗುತ್ತಿದೆ; | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 86 ಇಎಫ್‌ಎಸ್ 2016, ದಿನಾಂಕ:27.08.2016ರಲ್ಲಿ ಪೊಲೀಸ್ ಇಲಾಖೆಯ ಪಿ.ಎಸ್.ಐ ಮತ್ತು ಕೆಳಹಂತದ ಸಿಬ್ಬಂದಿಗಳಿಗೆ ಉಚಿತ ಪಡಿತರ ಬದಲಾಗಿ ಮಾಸಿಕ ರೂ.400/- ಮಂಜೂರಾಗಿರುತ್ತದೆ. ಸದರಿ ಭತ್ಯೆಯನ್ನು ಆದೇಶ ಜಾರಿಯಾದಾಗಿನಿಂದ ನೀಡಲಾಗುತ್ತಿದೆ. |
| ಆ) | ಸದರಿ ಭತ್ಯೆಯನ್ನು ದೀರ್ಘಕಾಲದಿಂದ ಸರ್ಕಾರ ಪರಿಷ್ಕರಣೆ ಮಾಡದಿರಲು ಕಾರಣಗಳೇನು; | ಸದರಿ ಪಡಿತರ ಭತ್ಯೆಯನ್ನು ಪರಿಷ್ಕರಣೆ ಮಾಡುವ ಪ್ರಸ್ತಾವನೆ ಇರುವುದಿಲ್ಲ. |
| ಇ) | ಯಾವ ಕಾಲಮಿತಿಯಲ್ಲಿ ಪರಿಷ್ಕರಣೆ ಮಾಡಲಾಗುವುದು; | |
| ಈ) | ಆರಕ್ಷಕ ಪೇದೆಗೆ ಮಾಸಿಕ ರೂ.3,000/-ಗಳ ಹಾಗೂ ಮುಖ್ಯಪೇದೆಗೆ ಮಾಸಿಕ ರೂ.2,000/-ಗಳ ಕಷ್ಟ ಭತ್ಯೆಯನ್ನು (ಹಾರ್ಡ್‌ಶಿಪ್) ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಉ) | ಹಾಗಿದ್ದಲ್ಲಿ, ಮುಖ್ಯ ಪೇದೆ ಹುದ್ದೆಗೆ ಬಡ್ತಿ ಪಡೆದವರಿಗೆ ಮಾಸಿಕ ರೂ.1,000/- ಕಷ್ಟ ಭತ್ಯೆಯನ್ನು ಕಡಿತಗೊಳಿಸಲು ಕಾರಣಗಳೇನು; | ಕಷ್ಟ ಪರಿಹಾರ ಭತ್ಯೆಯನ್ನು ಹುದ್ದೆ ಹಾಗೂ ಅವರ ವೇತನ ಶ್ರೇಣಿ ಆಧಾರದ ಮೇಲೆ ಸರ್ಕಾರವು ನಿಗದಿಪಡಿಸಿರುತ್ತದೆ. |
| ಊ) | ಇದರಿಂದ ಭತ್ಯೆ ನೀಡುವಲ್ಲಿ ತಾರತಮ್ಯ ಉಂಟಾಗಿಲ್ಲವೇ; | ಉದ್ಭವಿಸುವುದಿಲ್ಲ. |
| ಋ) | ತಾರತಮ್ಯ ನಿವಾರಿಸಿ, ಸಾಮಾಜಿಕ ನ್ಯಾಯ ಕಾಪಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? | ಉದ್ಭವಿಸುವುದಿಲ್ಲ. |

HD/189/PPS/2021

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು